ಕಟ್ಟಿಕೊಂಡರು. ಸೊಂಟದ ಮೇಲಿನ ಬಟ್ಟೆಗಳನ್ನು ತೆಗೆದು, ಊರ ಜನರ ಮುಂದೆ ಯಜ್ಞಕುಂಡದಂತಿದ್ದ ಬೆಂಕಿಯಲ್ಲಿ ಸುಟ್ಟರು. ಚಂದ್ರನಿಗೆ 'ಧಿಕ್ಕಾರ', 'ಬಹಿಷ್ಕಾರ' ಮಂತ್ರಗಳನ್ನು ಘೋಷಿಸಿದರು. ಮತ್ತೆ ತಮ್ಮ ಯಥಾಸ್ಥಿತಿಗೆ ಹಿಂತಿರುಗಿ ಸಮಾಧಾನದ ನಿಟ್ಟುಸಿರು ಬಿಟ್ಟರು.

ಒಂದು ಸಂಜೆ ಹೈದರಾಬಾದಿನಿಂದ ಚಂದ್ರನ ಅಕ್ಕ ಭಾವ ಬಂದರು. ಅವನನ್ನು ಮರ್ಯಾದೆಯಾಗಿ ಊರು ಬಿಟ್ಟು ಹೋಗಲು ಹೇಳಿದರು. 'ನೀವಿಬ್ಬರೂ ಚಿಕ್ಕಂದಿನಿಂದ ಸಾಕಿ ಸಲಹಿದ ಹುಡುಗ ನಾನಲ್ಲವೇ? ನನ್ನ ಬಗ್ಗೆ ಕೊಂಚವಾದರೂ ಪ್ರೀತಿ ಮಮಕಾರ ನಿಮಗಿಲ್ಲವೇ? ಚಂದ್ರ ಕಣ್ಣೀರಿಟ್ಟು ಕೇಳಿದ. 'ಅರಿಯದೇ ಮಾಡಿದ ಪಾಪವಲ್ಲ. ಅರಿತ ಮೇಲೂ ಅದೇ ಪಾಪವನ್ನು ಮಾಡುವಷ್ಟು ಮೂರ್ಖರು, ಧರ್ಮಭ್ರಷ್ಟರು ನಾವಲ್ಲ' ಎಂದ ಚಂದ್ರನ ಭಾವ. ಚಂದ್ರನ ಅಕ್ಕ ಹೇಳಿದಳು, 'ನಿನ್ನನ್ನು ಕಂಡರೆ ನನಗೆ ಜಿಗುಪ್ಸೆಯಾಗುತ್ತಿದೆ. ಇಷ್ಟು ವರ್ಷ ನಮ್ಮೊಡನಿದ್ದು ನಮ್ಮ ವಂಶಕ್ಕೆ ಮೈಲಿಗೆ ಬಳಿದದ್ದು ಸಾಕು. ನನ್ನ ಅಪ್ಪ ಅನ್ನಿಸಿಕೊಂಡವನು ಇಂಥ ಹೀನ ಕೆಲಸ ಮಾಡಿರಬಹುದೆಂದು ನಾವು ಕನಸಲ್ಲೂ ಕಲ್ಪಿಸಿಕೊಂಡಿರಲಿಲ್ಲ. ಆದದ್ದಾಯಿತು. ಆದರೆ ನನ್ನ ತಂದೆಯ ಯಾವಳೋ ಒಬ್ಬ ಸೂಳೆಗೆ ಹುಟ್ಟಿದ ನಿನಗೆ ಈ ಪಿತ್ರಾರ್ಜಿತ ಆಸ್ತಿಯ ಮೇಲೆ ಯಾವ ಅಧಿಕಾರವೂ ಇರಲು ಸಾಧ್ಯವಿಲ್ಲ. ಮರ್ಯಾದೆಯಾಗಿ ನೀನಾಗಿ ಮನೆಯಿಂದ ಹೊರಗೆ ಹೋಗದಿದ್ದರೆ, ನಾವು ಕೋರ್ಟಿಗೆ ಹೋಗಿ, ಪೊಲೀಸರಿಂದ ನಿನ್ನನ್ನು ಊರಾಚೆಗೆ ದಬ್ಬಿಸಬೇಕಾಗುತ್ತೆ'. ಚಂದ್ರನಿಗೆ ವಾಕರಿಗೆ ಬಂತು. ಜೊತೆಗೆ ರೋಷವೂ ಉಕ್ಕಿ ಬಂತು. ಹೇಳಿದ, 'ಈ ಆಸ್ತಿಯನ್ನು ನನ್ನಿಂದ ಕಿತ್ತುಕೊಳ್ಳಲು ನಿಮಗ್ಯಾರಿಗೂ ಸಾಧ್ಯವಿಲ್ಲ. ನಾನು ಜಗ್ಗರೆಡ್ಡಿಯ ನ್ಯಾಯಬದ್ಧ ಮಗನೇ ಎಂದು ಸಾಧಿಸಿದರೆ, ಅದನ್ನು ಅಲ್ಲಗಳೆಯಲು ಯಾವ ಸಾಕ್ಷ್ಯಾಧಾರಗಳೂ ನಿಮ್ಮಲ್ಲಿಲ್ಲ. ಅಪ್ಪನ ವಿಲ್ಲು ನನ್ನ ಬಳಿ ಇದೆ. ನಾನೇ ಕೋರ್ಟಿಗೆ ಹೋಗ್ತೇನೆ. ಯಾರು ಗೆಲ್ತೀವೋ ನೋಡೇ ಬಿಡೋಣ'. ತನ್ನ ಸೂಟ್‌ಕೇಸಿನಲ್ಲಿ ತನ್ನ ಬಟ್ಟೆ, ಬರೆ ದಾಖಲೆ ಪತ್ರಗಳು, ಒಂದಷ್ಟು ಹಣ ತುಂಬಿಕೊಂಡು, ಚಂದ್ರ ಮನೆ ಬಿಟ್ಟು ಬಿರಬಿರನೆ ನಡೆದ.

ಕವಿದ ಕಗ್ಗತ್ತಲು, ಊರಲ್ಲಾಗಲೀ ಹೊಲಗೇರಿಯಲ್ಲಾಗಲೀ ಚಂದ್ರನಿಗೆ ಆಶ್ರಯವಿರಲಿಲ್ಲ. ರಾತ್ರಿ ಕಳೆಯಲು ಊರಾಚೆಯ ಪಾಳು ಗುಡಿ ಹೊಕ್ಕ. ಗೋಡೆಗೆ ಬೆನ್ನೊರಗಿಸಿ ಕೂತು, ಕಾಲು ಚಾಚಿ, ಸಿಗರೇಟ್ ಹಚ್ಚಿದ. ಅವನೀಗ ಯಾರಿಗೂ ಬೇಕಿಲ್ಲದ ಪರಕೀಯನಾಗಿದ್ದ. ಹತಾಶನಾಗಿದ್ದ. ಅವನಲ್ಲಿದ್ದ ಮಾನವಪ್ರೇಮ, ಜೀವನೋತ್ಸಾಹ, ಬಂಡುಗಾರಿಕೆ ಬತ್ತಿ ಹೋಗಿದ್ದವು.

ಬೆಳಗ್ಗೆ ಪಾಳುಗುಡಿಯ ಪಕ್ಕದಲ್ಲಿದ್ದ ದೈತ್ಯಾಕಾರದ ಅರಳಿಮರದ ಕೊಂಬೆಗೆ ಚಂದ್ರನ ಹೆಣ ನೇತಾಡುತ್ತಿತ್ತು. ತನ್ನ ಎರಡು ಲುಂಗಿಗಳನ್ನು ಉಪಯೋಗಿಸಿ ಅವನು ನೇಣು ಹಾಕಿಕೊಂಡಂತಿತ್ತು. ಅದೇನು ನಿಜಕ್ಕೂ ಆತ್ಮಹತ್ಯೆಯೋ ಅಥವಾ ಕೊಲೆಯೋ ಕೊನೆಗೂ ಸರಿಯಾಗಿ ಪತ್ತೆಯಾಗಲಿಲ್ಲ.

★★★

'ಎಂಥ ಭೀಕರ ದಾರುಣ ದುರಂತ! ಆದರೆ ಎಷ್ಟು ಅವಾಸ್ತವ!' ಅನ್ನಿಸುತ್ತಿರಬೇಕಲ್ಲವೇ ನಿಮಗೆ? ಹೌದು. ನನಗೂ ಹಾಗೇ ಅನ್ನಿಸುತ್ತೆ. ಆದರೆ ಈ ಕಥೆಗೆ ಇದೇ ಮುಗಿತಾಯ ಇರಬೇಕು ಎನ್ನುವ ಹಟ ನನಗೇನೂ ಇಲ್ಲ. ಹೀಗೂ ಇರಬಹುದು:

★★★

ಅಂದು ರಾತ್ರಿ ಚಂದ್ರ ತನ್ನ 'ಜನ್ಮ ರಹಸ್ಯ' ನನಗೆ ತಿಳಿಸಿ ತನ್ನ ಭವಿಷ್ಯದ ದಾರಿಯ ಬಗ್ಗೆ